# ವಿಜ್ಞಾನ ಸಂವಹನಕ್ಕೀಗ ನಿಷೇಧ ಪರ್ವ



**ದೇಶದ ಎಲ್ಲರಿಗೂ ಮುಕ್ತ ವಿಜ್ಞಾನ, ತಂತ್ರಜ್ಞಾನ, ವಿಜ್ಞಾನ ಮಾಹಿತಿ, ದತ್ತಾಂಶ ಸಿಗಬೇಕೆನ್ನುವ ಚಿಂತನೆಗೆ ಗಂಡಾಂತರ ಒದಗಿದೆ. ಅತ್ಯುನ್ನತ ಸಂಶೋಧನೆ ಮತ್ತು ಚಿಂತನೆಗಳಿಗೆ ಸಂಬಂಧಿಸಿದ ಪ್ರಬಂಧ ಮತ್ತು ಲೇಖನಗಳನ್ನು ಪ್ರಕಟಿಸುವ ಅಂತರರಾಷ್ಟ್ರೀಯ ಜರ್ನಲ್‌ಗಳು, ತಮ್ಮಲ್ಲಿನ ಮಾಹಿತಿಯನ್ನು ಪುಕ್ಕಟೆಯಾಗಿ ನೀಡುವುದಿಲ್ಲ ಎಂದು ಪಟ್ಟುಹಿಡಿದಿವೆ.**

■ ಶ್ರೀಗುರು

ಅತ್ಯುನ್ನತ ಸಂಶೋಧನೆ ಮತ್ತು ಚಿಂತನೆಗಳಿಗೆ ಸಂಬಂಧಿಸಿದ ಪ್ರಬಂಧ ಮತ್ತು ಲೇಖನಗಳನ್ನು ಪ್ರಕಟಿಸುವ ಅಂತರರಾಷ್ಟ್ರೀಯ ಜರ್ನಲ್‌ಗಳು ಇನ್ನು ಮುಂದೆ ನಮ್ಮ ದೇಶದ ಸಂಶೋಧಕರಿಗೆ, ಆಸಕ್ತರಿಗೆ, ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮುಕ್ತವಾಗಿ ಲಭಿಸುವುದಿಲ್ಲ. ಅಂದರೆ ಇನ್ನು ಮುಂದೆ ಫ್ರೀ ಆಕ್ಸೆಸ್ ಇರುವುದಿಲ್ಲ. ಇವು ಪ್ರಕಟಿಸುವ ಮಾಹಿತಿ ಗೂಗಲ್‌ನಲ್ಲಿ ಸಿಗುವುದಿಲ್ಲ. ವಿಶ್ವ ಮಟ್ಟದ ಸಂಶೋಧನೆ, ಪ್ರಯೋಗ, ಚಿಂತನೆ ಮತ್ತವುಗಳ ಕುರಿತಾದ ಪ್ರಬಂಧ, ಬರಹಗಳಿಗೆಂದೇ ಮೀಸಲಿರುವ ಎಲ್ಸೆವಿಯರ್, ವೈಲಿ ಮತ್ತು ಅಮೆರಿಕನ್ ಕೆಮಿಕಲ್ ಸೊಸೈಟಿಗಳು, 'ತಮ್ಮಲ್ಲಿರುವ ಜ್ಞಾನಭಂಡಾರ ಪುಕ್ಕಟೆಯಲ್ಲ, ಅದನ್ನು ಬಳಸಿಕೊಳ್ಳಲು, ಓದಲು ಇಂತಿಷ್ಟು ಹಣ ತೆರಲೇಬೇಕು' ಎಂಬ ಕಟ್ಟಳೆ ಹೇರಿ, ತಮ್ಮ ಸಂಗ್ರಹದಲ್ಲಿನ ಮಾಹಿತಿಯನ್ನು ವಿಶ್ವಕ್ಕೆಲ್ಲ ಕಳ್ಳ ದಾರಿಯಲ್ಲಿ ಪುಕ್ಕಟೆಯಾಗಿ ಒದಗಿಸುತ್ತಿದ್ದ ಸೈ ಹಬ್ (Scihub) ಮತ್ತು ಲಿಬ್‌ಜೆನ್ (Libgen) ವೆಬ್‌ಸೈಟ್‌ಗಳ ಮೇಲೆ ದೆಹಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಿ, ಎರಡೂ ವೆಬ್‌ಸೈಟ್‌ಗಳನ್ನು ಪ್ರತಿಬಂಧಿಸಬೇಕೆಂದು ಅರ್ಜಿ ಸಲ್ಲಿಸಿವೆ.

ಎಲ್ಸೆವಿಯರ್, ವೈಲಿ, ಅಮೆರಿಕನ್ ಕೆಮಿಕಲ್ ಸೊಸೈಟಿ, ಟೇಲರ್ ಅಂಡ್ ಫ್ರಾನ್ಸಿಸ್, ವೈಲಿ, ಬ್ಲಾಕ್‌ವೆಲ್ ಸ್ಪ್ರಿಂಜರ್ ಮತ್ತು ಸೇಜ್‌ಗಳು ಪ್ರಪಂಚದಾದ್ಯಂತ ನಡೆಯುವ ಬಹುಪಾಲು ಅತ್ಯುನ್ನತ ಸಂಶೋಧನೆಗಳ ಕುರಿತಾದ ಸಾಹಿತ್ಯ, ಪ್ರಬಂಧಗಳನ್ನು ಪಿಡಿಎಫ್ ಮತ್ತು ಇಪುಸ್ತಕಗಳ ಮಾದರಿಯಲ್ಲಿ ಪ್ರಕಟಿಸಿ, ಹಣ ಸಂದಾಯ ಮಾಡುವವರಿಗೆ ಅವುಗಳನ್ನೋದುವ, ನೋಡುವ ಕೆಲವೊಮ್ಮೆ ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶ ಕಲ್ಪಿಸುತ್ತವೆ. ಮಾಹಿತಿಯನ್ನು ಪುಗಸಟ್ಟೆ ಓದುವಂತಿಲ್ಲ ಮತ್ತು ಮರುಸೃಷ್ಟಿ ಮಾಡುವಂತಿಲ್ಲ. ಈ ಸಂಸ್ಥೆಗಳ ರೇಟ್‌ಕಾರ್ಡ್ ಎಷ್ಟು ದುಬಾರಿಯೆಂದರೆ, ಅಮೆರಿಕದಂಥ ಶ್ರೀಮಂತ ದೇಶದ ಲೈಬ್ರರಿಗಳು ಕೂಡಾ ಇವರ ವೆಬ್‌ಸೈಟ್‌ನ ಚಂದಾದಾರಿಕೆ ಖರೀದಿಸಲು, ನವೀಕರಿಸಲು ಹಿಂದುಮುಂದು ನೋಡುತ್ತವೆ. ಶ್ರೀಮಂತ ದೇಶದ ಪರಿಸ್ಥಿತಿಯೇ ಹಾಗಿರುವಾಗ ನಮ್ಮಂಥ ದೇಶದ ಸಂಶೋಧಕರ, ಲೈಬ್ರರಿಗಳ ಗತಿಯೇನು?

ಸಣ್ಣ ಪುಟ್ಟ ವಿಚಾರಗಳ ಬಗ್ಗೆ ಗೂಗಲ್ ಇದೆ. ಆದರೆ ಸಮಕಾಲೀನ ಸಂಶೋಧನೆಗಳ ಪೂರ್ಣ ಹಾಗೂ ಪ್ರಮಾಣೀಕೃತ ಮಾಹಿತಿ ಅಲ್ಲಿರುವುದಿಲ್ಲ. ಅದನ್ನು ಪಡೆಯಲು ಮೇಲೆ ಹೆಸರಿಸಿದ ಪಬ್ಲಿಕೇಶನ್‌ಗಳನ್ನು ನೋಡಲೇಬೇಕು. ಇನ್ನು ಮುಂದೆ ಅದು ಸುಲಭವಲ್ಲ. ಈಗ ದೆಹಲಿ ನ್ಯಾಯಾಲಯಕ್ಕೆ ಕೇಸು ತಂದಿರುವ ವೆಬ್ ಪಬ್ಲಿಷರುಗಳು, ಈಗಾಗಲೇ ಜರ್ಮನಿ, ಫ್ರಾನ್ಸ್, ಸ್ವೀಡನ್, ರಶಿಯಾಗಳಿಗೆ ತನ್ನ ಪ್ರಕಟಣೆಗಳು ಫ್ರೀಯಾಗಿ ತಲುಪದಂತೆ ನಿರ್ಬಂಧ ಹೇರುವಲ್ಲಿ ಯಶಸ್ವಿಯಾಗಿವೆ. ಈ ನಿರ್ಬಂಧದ ವಿರುದ್ಧ ಸಿಡಿದೆದ್ದಿರುವ ಸಂಶೋಧಕ ಸಮುದಾಯ, 'ಇದು ತಪ್ಪು, ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆಗಳ ಫಲ ಇಡೀ ವಿಶ್ವಕ್ಕೆ ದಕ್ಕಬೇಕು, ಅದಕ್ಕಾಗಿ ನಾವು ಬೀದಿಗಿಳಿದು ಹೋರಾಡಲೂ ಸಿದ್ಧ' ಎಂದಿದೆ.

ಸೈಹಬ್‌ನ್ನು ಹುಟ್ಟುಹಾಕಿದ ಕಜಾಕ್‌ಸ್ತಾನದ ನರವಿಜ್ಞಾನ ಸಂಶೋಧಕಿ ಅಲೆಕ್ಸಾಂಡ್ರ ಎಲ್‌ಬಕ್ಯನ್, 'ಮಾಹಿತಿ ಯಾವುದೇ ಇರಲಿ, ಅದು ಎಲ್ಲರಿಗೂ ಮುಕ್ತವಾಗಿ ಸಿಗುವಂತಿರಬೇಕು' ಎಂದು ಪ್ರತಿಪಾದಿಸಿ ಅದರಂತೆ ಅಭಿವೃದ್ಧಿಪಥದ ಹಲವು ದೇಶಗಳಿಗೆ ಯಾವ ನಿರ್ಬಂಧವೂ ಇಲ್ಲದೇ ಮಾಹಿತಿ ಒದಗಿಸುತ್ತಿದ್ದಾಳೆ. ಎಲ್ಸೆವಿಯರ್‌ನ ಒಂದು ಭಾಗವಾಗಿರುವ 'ಸೈನ್ಸ್ ಡೈರೆಕ್ಟ್' ವೆಬ್‌ಸೈಟ್ ಕೂಡ ಲಿಬ್‌ಜೆನ್‌ಗೆ ತನ್ನೆಲ್ಲ ಜ್ಞಾನ ಭಂಡಾರವನ್ನು ಮುಫತ್ತಾಗಿ ನೀಡುತ್ತದೆ. ಭಾರತ, ಇರಾನ್, ಬ್ರೆಜಿಲ್, ರಶಿಯ, ಚೈನಾಗಳ ಲಕ್ಷಾಂತರ ಸಂಶೋಧಕರು ದಿನ ನಿತ್ಯ ಸೈ–ಹಬ್ ಬಳಸುತ್ತಾರೆ. 2011ರಿಂದಲೂ ಅಸ್ತಿತ್ವದಲ್ಲಿರುವ ಸೈಹಬ್ ಇದುವರೆಗೆ ಪ್ರಕಟವಾಗಿರುವ ಜಗತ್ತಿನ ಸುಮಾರು ಎಂಟು ಕೋಟಿ ಉನ್ನತ ಸಂಶೋಧನಾ ಪ್ರಬಂಧಗಳ ಪೈಕಿ ಶೇ 70ರಷ್ಟನ್ನು ಕದ್ದು ತನ್ನ ಜಾಲತಾಣಗಳಿಲ್ಲಿರಿಸಿಕೊಂಡು, ಬೇಕೆನೆಸಿದವರಿಗೆ ಬೇಕಾದಾಗಲೆಲ್ಲೊದಗಿಸುತ್ತದೆ. ಕದಿಯುವುದು, ಕದ್ದದ್ದನ್ನು ಇತರರಿಗೆ ನೀಡುವುದರಲ್ಲಿ ನಂಬರ್ ಒನ್ ಎನಿಸಿರುವ ಸೈಹಬ್ ವಿಶ್ವದ ಎಲ್ಲ ಸಂಶೋಧಕರ ಡಾರ್ಲಿಂಗ್ ಎಂದೇ ಪ್ರಸಿದ್ಧ. ರಶಿಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ಅದರ ಸಂಪರ್ಕಜಾಲ ವಿಶ್ವಾದ್ಯಂತ ಇದೆ.

ಬೌದ್ಧಿಕ ಸರಕನ್ನು ಕದಿಯುವ ಅಲೆಗ್ಸಾಂಡ್ರಾಳ ವಿರುದ್ಧ ಅನೇಕ ಕೇಸುಗಳು ಬಿದ್ದಿವೆಯಾದರೂ ಕಳ್ಳತನ ನಿರಾತಂಕವಾಗಿ ಮುಂದುವರೆದೇ ಇದೆ. ಕೆಲವು ಕೇಸುಗಳಲ್ಲಿ ಅಮೆರಿಕದ ಪ್ರಕಟಣಾ